ಆ) ಗದ್ದಿಗೆಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಯೋಜನೆ ಪಾರ್ಕ್ ನಿರ್ಮಾಣದಿಂದ ಸಾಧ್ಯವೇ; ಈ ಯೋಜನೆ ಯಾವ ಹಂತದಲ್ಲಿದೆ;

ಇ) ಇದಕ್ಕಾಗಿ ಈ ಹಿಂದೆ ಸರ್ಕಾರ ಭರವಸೆ ನೀಡಿದ್ದು ನಿಜವೇ;

ಈ) ಹಾಗಿದ್ದಲ್ಲಿ ಈ ಯೋಜನೆ ನಿರ್ಮಾಣಕ್ಕಾಗಿ ಈಗಾಗಲೇ ಬಿಡುಗಡೆಯಾಗಿರುವ ಹಣವೆಷ್ಟು;

ಉ) ಎಷ್ಟನ್ನು ಖರ್ಚು ಮಾಡಲಾಗಿದೆ; ಪಾರ್ಕ್ ನಿರ್ಮಾಣ ಕೆಲಸವನ್ನು ಯಾವಾಗ ಮುಗಿಸಲಾಗುತ್ತದೆ; ಪೂರ್ಣ ವಿವರ ನೀಡುವುದು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಗದ್ದುಗೆಯ ಸುತ್ತಲೂ ಪಾರ್ಕ್ ನಿರ್ಮಿಸುವ ಪ್ರಸ್ತಾವನೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಂದಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) - ಅದೇ -

ಈ) - ಅದೇ -

ಉ) - ಅದೇ -

ರಾಜ್ಯದಲ್ಲಿ ನೂತನ ಕಾಲೇಜುಗಳ ಪ್ರಾರಂಭ ಕುರಿತು

46 (98) - ಶ್ರೀ ಅಪ್ಪಚ್ಚು ರಂಜನ್, ಎಂ.ಪಿ (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಶಾಲೆಗಳನ್ನು ಹಾಗೂ ಪದವಿ ಪೂರ್ಣ ಕಾಲೇಜುಗಳನ್ನು ಸ್ಥಾಪಿಸಲು ಸರ್ಕಾರದ ನಿರ್ಧರಿಸಿದೆಯೇ?

ಆ) ನಿರ್ಧರಿಸಿದ್ದಲ್ಲಿ ಜಿಲ್ಲಾವಾರು ಪ್ರಾರಂಭಿಸಲು ಯೋಜಿಸಿರುವ ಶಾಲೆ - ಕಾಲೇಜುಗಳೆಷ್ಟು?

ಇ) ಇವು ಸಂಪೂರ್ಣ ಸರ್ಕಾರಿ ಶಾಲೆಗಳೇ ಅಥವಾ ಖಾಸಗಿ ಸಂಸ್ಥೆಯವರಿಗೂ ಮಂಜೂರಾತಿ ನೀಡಲಾಗುವುದೇ ಸರ್ಕಾರ ಹಾಗೂ ಖಾಸಗಿಯವರ ಕಾಲೇಜುಗಳ ಜಿಲ್ಲಾವಾರು ಮಾಹಿತಿ ಒದಗಿಸುವುದು.

ಈ) ಈ ವರ್ಷ ಎಷ್ಟು ಶಾಲೆ ಕಾಲೇಜುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಎಲ್ಲೆಲ್ಲಿ ಮಂಜೂರಾತಿ ನೀಡಲಾಗಿದೆ.

ಶ್ರೀ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಹೌದು

ಅ) ಶೈಕ್ಷಣಿಕ ಅಗತ್ಯತೆಯನ್ನು ಆಧರಿಸಿ ಮಂಜೂರು ಮಾಡಲಾಗುವುದು

ಇ) ಸರ್ಕಾರದ ವತಿಯಿಂದ ಪ್ರಾರಂಭಿಸಲ್ಪಟ್ಟ ಶಾಲೆಗಳು ಸಂಪೂರ್ಣವಾಗಿ ಸರ್ಕಾರಿ ಶಾಲೆಗಳಾಗಿರುತ್ತದೆ. ಇನ್ನು ಖಾಸಗಿ ಶಾಲೆಗಳನ್ನು ಪ್ರಾರಂಭಿಸಲು ಖಾಸಗೀ ಆಡಳಿತ ಮಂಡಳಿಗಳು ಮನವಿ ಸಲ್ಲಿಸಿದಲ್ಲಿ ಅವುಗಳನ್ನು ನಿಯಮಗಳನ್ವಯ ಪರಿಶೀಲಿಸಿ ಮಂಜೂರಾತಿ ನೀಡಲಾಗುವುದು. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಈ) 1) 2002-03ನೇ ಸಾಲಿಗೆ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

2) ಖಾಸಗಿ ಶಾಲೆಗಳ ಬಗ್ಗೆ ಸಂಸ್ಥೆಗಳಿಂದ ಬಂದಂತಹ ಪ್ರಸ್ತಾವನೆಗಳನ್ನು ನಿಯಮಗಳನ್ವಯ ಪರಿಶೀಲಿಸಿ ಮಂಜೂರಾತಿ ನೀಡಾಲಾಗುವುದು. ಈ ವರೆಗೆ ಒಟ್ಟಾರೆ 81 ಖಾಸಗಿ ಪ್ರೌಢ ಶಾಲೆಗಳಿಗೆ ಅನುಮತಿ ನೀಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ.

ತೀರ್ಥಹಳ್ಳಿ ಜೆ.ಸಿ ಆಸ್ಪತ್ರೆ ಅಭಿವೃದ್ಧಿ ಮತ್ತು ವೈದ್ಯರ ನೇಮಕ

48 (99) - ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಸರ್ಕಾರಿ ಜಯಚಾಮರಾಜೇಂದ್ರ ಆಸ್ಪತ್ರೆ ಅಭಿವೃದ್ಧಿಗೆ ಕೆಹೆಚ್ ಎಸ್ ಡಿಪಿ ಯೋಜನೆಯಲ್ಲಿ ನಿಯೋಜಿಸಿದ ಹಣ ಎಷ್ಟು ಇದರಲ್ಲಿ ಇರುವರೆಗೆ ಖರ್ಚು ಮಾಡಿದ ಹಣ ಎಷ್ಟು?

ಆ) ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆಯೇ? ಎಷ್ಟು ಹಾಸಿಗೆಗೆ ನಿಗದಿಪಡಿಸಿದೆ? ಇದಕ್ಕೆ ಸರಿಯಾಗಿ ವೈದ್ಯರು ಮತ್ತು ಇತರೆ ಹುದ್ದೆಗಳ ನೇಮಕ ಮಂಜೂರಾತಿಯಾಗಿದೆಯೇ? ಇಲ್ಲವಾದರೆ ಕಾರಣವೇನು?ಯಾವಾಗ ಮಾಡಲಾಗುವುದು?

ಇ) ಇದುವರೆಗೆ ಮಂಜೂರಾಗಿರುವ ವೈದ್ಯರ ಹುದ್ದೆಯಲ್ಲಿ ತುಂಬದೇ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ವರ್ಗಾವಣೆಯಾದರೂ ಆದೇಶ ಪಾಲನೆ ಮಾಡದೇ ಉದ್ಯೋಗಕ್ಕೆ ಹಾಜರಾಗದೇ ಇರುವ ವೈದ್ಯರ ಮೇಲೆ ಏನು ಕ್ರಮಕೈಗೊಳ್ಳಲಾಗಿದೆ? ಪ್ರಸೂತಿ ತಜ್ಞರು ಮತ್ತು ಶಸ್ತ್ರ ಚಿಕಿತ್ಸಕರು ಇಲ್ಲದೇ ಬಡರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನದಲ್ಲಿಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ತೀರ್ಥಹಳ್ಳಿಯ ಜಯಚಾಮರಾಜೇಂದ್ರ ತಾಲ್ಲೂಕು ಮಟ್ಟದ ಸರ್ಕಾರಿ ಆಸ್ಪತ್ರೆಯ ಅಭಿವೃದ್ಧಿಯನ್ನು ಒಟ್ಟು ರೂ. 288.11 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

ಆ) ಈ ಆಸ್ಪತ್ರೆಯನ್ನು ನವೀಕರಿಸಿದ್ದು, ಇದರ ಹಾಸಿಗೆ ಸಾಮರ್ಥ್ಯವು 100 ಆಗಿರುತ್ತದೆ. ನಾರ್ಮ್ ಅನ್ವಯ ವೈದ್ಯರು ಹಾಗೂ ಇತರೆ ಹುದ್ದೆಗಳನ್ನು ತುಂಬಲು ಕ್ರಮಕೈಗೊಳ್ಳಲಾಗುವುದು